ಆ) ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಸ್ವಂತ ನಿವೇಶನ ಹೊಂದಿರುವ ಪಕ್ಕಾ ಖಾತೆ ನಮೂನೆ-9 ನಮೂದಾಗಿರುವ ಫಲಾನುಭವಿಗಳನ್ನು ಆಯ್ಕೆ ಮಾಡಿ ವಸತಿಯನ್ನು ಕಲ್ಪಿಸಲಾಗುತ್ತಿದೆ. (ಗ್ರಾಮಠಾಣ ನಿವೇಶನ) ಪಕ್ಕಾ ನಮೂನೆ-9ರಲ್ಲಿ ನಮೂದು ಇರದ ಫಲಾನುಭವಿಗಳಿಗೆ ವಸತಿ ಸೌಕರ್ಯ ಕಲ್ಪಿಸಿ ಸಾಲದ ಹಣ ಬಿಡುಗಡೆ ಮಾಡುತ್ತಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

790 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪೂರ ಜಿಲ್ಲೆಯ ಬಸವನಬಾಗೇವಾಡಿ ಮತಕ್ಷೇತ್ರದ, ಆಲಮಟ್ಟಿ, ನಿಡಗುಂದಿ, ಬದವನಬೇಗೇವಾಡಿ, ಕೋಲ್ಹಾರ, ಮುಂತಾದ ಗ್ರಾಮಗಳಲ್ಲಿ ವಾಸವಾಗಿರುವ ಸುಡಗಾಡಸಿದ್ದರು, ಕೊಂಚಿಕೊರವರು, ಪೊತರಾಜರು ಸೇರಿದಂತೆ ಇನ್ನಿತರ ಆದಿವಾಸಿ ಜನರಿಗೆ ವಸತಿ ಸೌಕರ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮ ಏನು?

ಶ್ರೀ ವಿ. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹೌದು.

ಆ) ಸದರಿ ಜನಂಗದ ವಸತಿರಹಿತ ಮತ್ತು ನಿವೇಶನರಹಿತ ಫಲಾನುಭವಿಗಳ ವಿವರ ಲಭ್ಯವಿರುವ ಕಾರಣ, ಸದರಿ ಜನಾಂಗದ ಸಮಗ್ರ ಮಾಹಿತಿಯನ್ನು ಭೌತಿಕ ಪರಿಶೀಲನೆ ನಡೆಸಿ ನೀಡಲು ದಿನಾಂಕ: 29-06-2009 ರಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಿಜಾಪೂರ ಇವರಿಗೆ ಕೋರಲಾಗಿದೆ.

103 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಆಯ್ಕೆಯಾದ 2ನೇ ಹಂತದ ಗ್ರಾಮಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ವಿವರಣೆ ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾದ ಮತ್ತು ಅಭಿವೃದ್ಧಿಪಡಿಸಲಾಗದಿರುವ ಗ್ರಾಮಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ವಿವರಣೆ ನೀಡುವುದು);

ಇ) ಈ ಯೋಜನೆಗೆ ಸರ್ಕಾರವು ಹಾಕಿಕೊಂಡಿರುವ ರೂಪು ರೇಷೆಗಳೇನು;

ಈ) ಸರ್ಕಾರವು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಒಂದು ಗ್ರಾಮಕ್ಕೆ ನೀಡುವ ಅನುದಾನದ ಮೊತ್ತವೆಷ್ಟು;

ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ರಾಜ್ಯದಲ್ಲಿ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಆಯ್ಕೆಯಾದ 2ನೇ ಹಂತದ ಗ್ರಾಮಗಳ ಸಂಖ್ಯೆ 222. ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಿ, ತಾಲ್ಲೂಕುವಾರು ಗ್ರಾಮಗಳ ವಿವರಣೆ ಅನುಬಂಧದಲ್ಲಿ ನೀಡಿದೆ.

ಆ) 2ನೇ ಹಂತದಲ್ಲಿ ಆಯ್ಕೆಯಾದ ಗ್ರಾಮಗಳ ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆಯ್ಕೆಯಾದ ಎಲ್ಲಾ ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುವುದು.

ಇ) **ಸುವರ್ಣ ಗ್ರಾಮೋದಯ ಕಾರ್ಯಕ್ರಮದ ರೂಪುರೇಷೆಗಳು :**

- ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮ ಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು;
- ಭೂ ಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು;
- ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ ಸೌಲಭ್ಯ, ಇತ್ಯಾದಿಗಳನ್ನೊಳಗೊಂಡಂತೆ; ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು;
- ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶಗಳನ್ನು ಸೃಜಿಸುವುದು;

- ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.

ಈ) ಆಯಾ ತಾಲ್ಲೂಕಿಗೆ ನಿಗದಿಪಡಿಸಲಾದ ಅನುದಾನವನ್ನು ಆಯಾ ತಾಲ್ಲೂಕಿನಲ್ಲಿ ಆಯ್ಕೆಯಾದ ಒಟ್ಟಾರೆ ಗ್ರಾಮಗಳ ಜನಸಂಖ್ಯೆ ಆಧಾರದ ಮೇಲೆ ತಲಾನುದಾನವನ್ನು ನಿಗದಿಪಡಿಸಿ ಆಯಾ ಗ್ರಾಮಗಳ ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ನಿಗದಿಪಡಿಸಲಾಗಿದೆ.

ಕರ್ನಾಟಕ ವಿಧಾನಸಭೆ ಸದಸ್ಯರಾದ ಮಾನ್ಯ ಶ್ರೀ : ಕರಡಿ ಸಂಗಣ್ಣ ಅಮರಪ್ಪರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 103ರ ಅನುಬಂಧ

ಸುವರ್ಣ ಗ್ರಾಮೋದಯ ಯೋಜನೆಯ 2ನೇ ಹಂತದಡಿ ಆಯ್ಕೆಯಾದ ಗ್ರಾಮಗಳ ಸಂಖ್ಯೆಯ ವಿವರ

ಕ್ರ. ಸಂ.	ಜಿಲ್ಲೆ	ಕ್ರ. ಸಂ.	ತಾಲ್ಲೂಕು	ಗ್ರಾಮಗಳ ಸಂಖ್ಯೆ
I	ಬೀದರ್	1	ಔರಾದ್	7
		2	ಭಾಲ್ಕಿ	6
		3	ಬಸವಕಲ್ಯಾಣ	4
		4	ಬೀದರ್	9
		5	ಹುಮಾನಾಬಾದ್	9
II	ಬಳ್ಳಾರಿ	1	ಬಳ್ಳಾರಿ	10
		2	ಹ.ಬೊ.ಹಳ್ಳಿ	5
		3	ಹಡಗಲಿ	5
		4	ಹೊಸಪೇಟೆ	5
		5	ಕೂಡ್ಲಿಗಿ	5
		6	ಸಂಡೂರು	3
		7	ಸಿರುಗುಪ್ಪ	5
III	ಗುಲ್ಬರ್ಗಾ	1	ಅಫಜಲ್‌ಪುರ	4
		2	ಆಳಂದ	7
		3	ಚಿಂಚೋಳಿ	8
		4	ಚಿತ್ತಾಪೂರ	6

		5	ಗುಲ್ಬರ್ಗಾ	6
		6	ಜೇವರ್ಗಿ	7
		7	ಸೇಡಂ	6
		8	ಶಹಾಪೂರ	8
		9	ಸುರಪೂರ	11
		10	ಯಾದಗೀರ	11
IV	ಕೊಪ್ಪಳ	1	ಗಂಗಾವತಿ	7
		2	ಕೊಪ್ಪಳ	7
		3	ಕುಷ್ಟಗಿ	7
		4	ಯಲಬುರ್ಗಾ	4
V	ರಾಯಚೂರು	1	ದೇವದುರ್ಗ	5
		2	ಲಿಂಗಸುಗೂರು	14
		3	ಮಾನ್ವಿ	10
		4	ರಾಯಚೂರು	9
		5	ರಾಯಚೂರು	12
	ಒಟ್ಟು			**222**

891 ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲಾದ ಸೈಕಲ್‌ಗಳ ಮೊತ್ತವನ್ನು ಯಾವ ಮೂಲಗಳಿಂದ ಭರಿಸಲಾಗಿದೆ;

ಆ) ಎಷ್ಟು ಮೊತ್ತವನ್ನು ಕಳೆದ ಆರ್ಥಿಕ ವರ್ಷ ಮತ್ತು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸೈಕಲ್‌ಗಾಗಿ ಖರ್ಚು ಮಾಡಲಾಗಿದೆ (ವಿವರ ಒದಗಿಸುವುದು);

ಇ) ಸೈಕಲ್ ವಿತರಣೆಯನ್ನು ಯಾವ ಸಂಸ್ಥೆಗೆ ನೀಡಲಾಗಿದೆ;

ಈ) ವಿತರಿಸಲಾದ ಸೈಕಲ್ಲಿನ ತಲಾ ಒಂದಕ್ಕೆ ನಿಗದಿಪಡಿಸಿದ ಬೆಲೆ ಎಷ್ಟು; ಸಂಸ್ಥೆವಾರು ಮೊತ್ತ ಎಷ್ಟು; ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಸೈಕಲ್ ಖರೀದಿಸಿ ವಿತರಿಸಲಾಗಿದೆ (ವಿವರ ಒದಗಿಸುವುದು);